# ಆಹಾ ಸುದ್ದಿ!

★ ಸಸಿತೋಟ

ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಆದರೆ ಪ್ರೀತಿಯನ್ನು ವ್ಯಕ್ತಪಡಿಸುವುದಕ್ಕೆ 13 ಕೋಟಿ ರೂಪಾಯಿ ಖರ್ಚಾದರೆ.. ಹೌದು ಸಿಂಗಪುರದಲ್ಲಿರುವ ಸಿ ಲಾ ವೈ ಎಂಬ ಉಪಾಹಾರಗೃಹದಲ್ಲಿ ನಿಮ್ಮ ಮನದನ್ನೆಯನ್ನು ಕರೆದುಕೊಂಡು ಹೋಗಿ 'ಐ ಲವ್ ಯು' ಅಂತ ಹೇಳಲು ಈ ಅಗಾಧ ಮೊತ್ತದ ಶುಲ್ಕ ತೆರಬೇಕಂತೆ. ವಿಶೇಷ ಐಸ್‌ಕ್ರೀಂ ತಿನ್ನಲು ಚಿನ್ನದ ಚಮಚ, ಪ್ರೀತಿಯ ಪ್ರಸ್ತಾವ ಇಡಲು ವಜ್ರದ ಉಂಗುರ.. ಎಲ್ಲವನ್ನೂ ಉಪಾಹಾರಗೃಹದವರು ಪೂರೈಸುವರಂತೆ. ಅಲ್ಲಿ ಬುಕ್ ಮಾಡುವ ಮೊದಲೇ ಗೆಳತಿ ಪ್ರೇಮವನ್ನು ನಿರಾಕರಿಸದಂತೆ ಮನದಟ್ಟು ಮಾಡಿಕೊಳ್ಳಿ. ಇಲ್ಲದಿದ್ದರೆ ನಿರಾಕರಣೆಗೆ 13 ಕೋಟಿ ರೂಪಾಯಿ ತೆರಬೇಕಾಗುತ್ತದೆ.



ಹಾಟ್ ಸಾಸ್ ಟಬ್‌ನಲ್ಲಿ ಸ್ನಾನ ಮಾಡಿದ ಈ ಮಂಡೆ ಇಲ್ಲದವ ಸೆಮ್ರೆ ಕ್ಯಾಂಡರ್. 1250 ಬಾಟಲ್ ಸಾಸ್ ಟಬ್‌ಗೆ ಸುರುವಿದ. ಜೊತೆಗೆ ಕೆಂಪು ಮೆಣಸಿನಕಾಯಿಗಳನ್ನು ಮಿಕ್ಸ್ ಮಾಡಿದ. ಅದನ್ನು ಅರೆದು ಹಾಟ್ ಹಾಟ್ ಸಾಸ್ ಮಾಡುವ ಬದಲು ತಾನೇ ಮುಳುಗಿಕೊಂಡು ಸ್ನಾನ ಮಾಡಲು ಹೋದ. ಮುಂದಿನ ಪರಿಣಾಮ ಊಹಿಸಿ. ಕೆಟ್ಟ ನಿರ್ಧಾರಕ್ಕೆ ಬಹುಮಾನವಿದ್ದಿದ್ದರೆ ಈತನಿಗೇ ಸಿಗುತ್ತಿತ್ತು. ಹಾಟ್ ಸಾಸ್ ಹಾಗೂ ಹಣ ಸುಮ್ಮನೆ ವೇಸ್ಟ್ ಆಯ್ತು ಎನ್ನುವ ಹಾಗೂ ಇಲ್ಲ. ಅವೆಲ್ಲ ಅವಧಿ ಮುಗಿದ ಬಾಟಲ್‌ಗಳು. ಸದ್ಯ ಈತನ ಅವಧಿ ಮುಗಿದಿಲ್ಲವಲ್ಲ ಎಂದು ಯೂ ಟ್ಯೂಬ್‌ನಲ್ಲಿ ವೀಕ್ಷಿಸಿದ 15 ಲಕ್ಷ ಮಂದಿ ಹಾಟ್ ಉಸಿರು ಬಿಟ್ಟಿರಬಹುದು.

ಟೆಕ್ಸಾಸ್ ವಿಶ್ವವಿದ್ಯಾನಿಲಯದಲ್ಲಿ ಗನ್ ಹಿಡಿದುಕೊಂಡು ತರಗತಿಗಳಿಗೆ ಬರುವುದನ್ನು ಅಲ್ಲಿಯ ಆಡಳಿತ ಕಾನೂನುಬದ್ಧ ಮಾಡಲು ಹೊರಟಿದೆಯಂತೆ. ಈ ನಿರ್ಧಾರವನ್ನು ವಿವಿ ವಿದ್ಯಾರ್ಥಿಗಳು ಪ್ರತಿಭಟಿಸಿದ್ದು ಹೇಗೆ ಗೊತ್ತೇ? ಬಹಳ ಸಿಂಪಲ್ಲಾಗಿ, ಲೈಂಗಿಕ ಆಟಿಕೆಗಳನ್ನು ಹಿಡಿದುಕೊಂಡು ಪ್ರತಿಭಟಿಸಿದರಂತೆ. ಸ್ಥಳೀಯ ಕಾನೂನಿನ ಪ್ರಕಾರ ಇಂತಹ ಆಟಿಕೆಗಳನ್ನು ಹಿಡಿದುಕೊಂಡು ಓಡಾಡುವುದು ಕಾನೂನಿಗೆ ವಿರುದ್ಧವಂತೆ. ಗನ್ ಹಾಗೂ ಲೈಂಗಿಕ ಆಟಿಕೆಗಳಲ್ಲಿ ಯಾವುದು ಭಯಂಕರ, ಅಪಾಯಕಾರಿ ಎಂದು ನಿರ್ಧರಿಸುವುದು ಎಷ್ಟೆಂದರೂ ಅನುಭವಸ್ಥರಿಗೆ ಬಿಟ್ಟದ್ದು.



ಈ ಶವ ಪೆಟ್ಟಿಗೆಯಲ್ಲಿ ಮಲಗಿಕೊಂಡು ಯುವತಿಯೊಬ್ಬಳು ಪ್ರಾತ್ಯಕ್ಷಿಕೆ ತೋರಿಸುತ್ತಿರುವುದು ಟೋಕಿಯೋದಲ್ಲಿ ನಡೆದ ಸತ್ತ ನಂತರ ಎಂಬ ಕೈಗಾರಿಕೆ ಪ್ರದರ್ಶನದಲ್ಲಿ. ಹಿರಿಯ ಜೀವಗಳೇ ಅಧಿಕ ಸಂಖ್ಯೆಯಲ್ಲಿರುವ ಅಲ್ಲಿ ಇದು ದೊಡ್ಡ ಉದ್ಯಮವಾಗಿ ಬೆಳೆದಿದೆಯಂತೆ. ನಂತರದ್ದಕ್ಕೆ ಖರ್ಚು ಮಾಡಲು ಇದ್ದಾಗ ಬ್ಯಾಂಕ್ ಬ್ಯಾಲನ್ಸ್ ಹೆಚ್ಚಿಸಿಕೊಳ್ಳಬೇಕಾದ ಪರಿಸ್ಥಿತಿ.




ಇದು ಪಿಜ್ಜಾ ವಿತರಿಸುವ ಡ್ರೋನ್. ಆಕ್ಲೆಂಡ್‌ನಲ್ಲಿ ಪ್ರಾಯೋಗಿಕ ಹಾರಾಟ ನಡೆಸುತ್ತಿದೆಯಂತೆ. ಬೆಂಗಳೂರಿಗೇನಾದರೂ ಬಂದರೆ ತಿರುವು, ಅಡ್ಡ, ಮುಖ್ಯ ರಸ್ತೆ, ಬ್ಲಾಕ್, ಮಹಡಿ.. ಎಂದು ವಿಳಾಸದ ಬಗ್ಗೆ ತಲೆ ಕೆಡಿಸಿಕೊಂಡ ಡ್ರೋನ್ ತಾನೇ ತಣ್ಣಗಾದ ಪಿಜ್ಜಾ ಅಗಿಯ ಬೇಕಾಗಬಹುದು.

ನಾರ್ವೆಯ ಕಿಂಗ್ ಆಫ್ ಗಾರ್ಡ್‌ನ ಸದಸ್ಯ ಸರ್ ನಿಲ್ಸ್ ಒಲಾವ್ ಇತ್ತೀಚೆಗೆ ಸ್ಕಾಟ್ಲೆಂಡ್‌ನಲ್ಲಿ ಗಾರ್ಡ್ ಆಫ್ ಆನರ್ ಸ್ವೀಕರಿಸಿದರಂತೆ. ಅಲ್ಲಿ ಅವರಿಗೆ ಬ್ರಿಗೇಡಿಯರ್ ಹುದ್ದೆಗೆ ಬಡ್ತಿ ನೀಡಲಾಯಿತಂತೆ. ಅಷ್ಟಕ್ಕೂ ಈ ನೂತನ ಬ್ರಿಗೇಡಿಯರ್ ನಿಲ್ಸ್ ಒಲಾವ್ ಒಂದು ಪೆಂಗ್ವಿನ್. ಆ ಸಮಾರಂಭ ನಡೆದಿದ್ದು ಎಡಿನ್‌ಬರ್ಗ್ ಮೃಗಾಲಯದಲ್ಲಿ. ಶಿಸ್ತಾಗಿ ನಡೆದುಕೊಂಡು ಹೋಗಲು ಏನು ಲಂಚ ನೀಡಿದರೋ ಬ್ರಿಗೇಡಿಯರ್ ಸಾಹೇಬರಿಗೆ.

